23	ಮುದ್ದಲಿಂಗನಹಳ್ಳಿ	01	01
24	ಚಂದನಹೊಸಳ್ಳಿ	01	01
25	ಬಿಲ್ಲಕೋಟಹಳ್ಳಿ	01	01
	ಒಟ್ಟು	85	148

ರಸ್ತೆ ಕಾಮಗಾರಿ

5323 (5751); ಡಾ: ಕೆ. ಶ್ರೀನಿವಾಸಮೂರ್ತಿ (ನೆಲಮಂಗಲ)

ಅ) ನೆಲಮಂಗಲ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಿಂದ ಅಂದರೆ ಊರ್ಡಿಗೆರೆಯಿಂದ ಮಾಗಡಿವರೆಗೆ ಕೆಶಿಪ್ ಕಂಪನಿಯವರಿಂದ ರಸ್ತೆ ಕಾಮಗಾರಿ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಸಂಸ್ಥೆಯವರು ರಸ್ತೆ ಕಾಮಗಾರಿಯನ್ನು ಪೂರ್ಣ ಗೊಳಿಸದೇ ಸಾರ್ವಜನಿಕರಿಗೆ ಓಡಾಡಲು ಅನಾನುಕೂಲವಾಗಿರುವುದು ಸಹ ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಊರ್ಡಿಗೆರೆಯಿಂದ ಮಾಗಡಿವರೆಗೆ ಎಲ್ಲೆಲ್ಲಿ ಕಾಮಗಾರಿ ಸ್ಥಗಿತಗೊಂಡು ಸಾರ್ವಜನಿಕರಿಗೆ ತೊಂದರೆಯಾಗಿದೆ; ಗ್ರಾಮಗಳವಾರು ವಿವರ ನೀಡುವುದು;

ಈ) ಈ ಕಾಮಗಾರಿ ಬಗ್ಗೆ ಹಿಂದೆ ಕೂಡ ಸರ್ಕಾರದ ಗಮನ ಸೆಳೆದಿದ್ದು ಏನು ಪ್ರಯೋಜನ ಆಗದೇ ಇರುವುದು ಸಹ ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಈ ಕಾಮಗಾರಿ ಗುತ್ತಿಗೆದಾರರು, ರಸ್ತೆ ಪರಿಪೂರ್ಣ ಕೆಲಸ ಮಾಡದೆ ಸಾರ್ವಜನಿಕರಿಗೆ ತೊಂದರೆ ಮಾಡಲು ಮುಂದಾಗಿರುವುದಕ್ಕೆ ಕಾರಣವೇನು; (ಸಂಪೂರ್ಣ ವಿವರ ನೀಡುವುದು);

ಊ) ಈ ಕಾಮಗಾರಿಗೆ ಸರ್ಕಾರ ಬಿಡುಗಡೆ ಮಾಡಿರುವ ಹಣವೆಷ್ಟು; ಕಾಮಗಾರಿ ಪ್ರಾರಂಭ ಮಾಡಿ ಪೂರ್ಣಗೊಳಿಸಿ ರಸ್ತೆ ಸಾರ್ವಜನಿಕರ ಅನುಕೂಲಕ್ಕೆ ಬಿಡಲು ಕೊಟ್ಟಿರುವ ಸಮಯವೆಷ್ಟು;

ಋ) ಸರ್ಕಾರ ಮತ್ತು ಇಲಾಖೆ ನಿಗದಿಪಡಿಸಿರುವ ಅವಧಿ ಮುಗಿದಿದ್ದರೆ ಸಂಬಂಧಪಟ್ಟ ಗುತ್ತಿಗೆದಾರರ ಮೇಲೆ ಸರ್ಕಾರ ಏಕೆ ಕ್ರಮ ಜರುಗಿಸಬಾರದು; (ವಿವರ ನೀಡುವುದು);

ಡಾ: ಹೆಚ್. ಸಿ. ಮಹದೇವಪ್ಪ (ಲೋಕೋಪಯೋಗಿ ಸಚಿವರು)

ಅ) ಬಂದಿದೆ.

ಆ) ಬಂದಿದೆ. ಭೂಸ್ವಾಧೀನ ಪ್ರಕ್ರಿಯೆಗಳು ಬಹುತೇಕ ಮುಗಿದಿದ್ದು, ಇಷ್ಟರಲ್ಲಿಯೇ ಕಾಮಗಾರಿಗಳನ್ನು ಪ್ರಾರಂಭಿಸಿ, ಮಾರ್ಚ 2016 ರ ವೇಳೆಗೆ ಪೂರ್ಣಗೊಳಿಸಲು ಯೋಜಿಸಲಾಗುತ್ತಿದೆ.

ಇ) ಊರ್ಡಿಗೆರೆಯಿಂದ ಮಾಗಡಿ ವರೆಗಿನ ರಸ್ತೆಯಲ್ಲಿ ಊರ್ಡಿಗೆರೆ, ಕುರುವೇಲು, ಲಕ್ಕೂರು, ಸೋಂಪುರ, ಚಂದನಹೊಸಹಳ್ಳಿ, ಹೊನ್ನೇನಹಳ್ಳಿ, ಬರಗೇನಹಳ್ಳಿ, ಶಿವಗಂಗೆ (ಬೈಪಾಸ್), ಕಂಬಾಳು ಹಾಗೂ ಬಸವಪಟ್ಟಣ ಭಾಗಗಳಲ್ಲಿ ಅಭಿವೃದ್ಧಿ ಕಾಮಗಾರಿಯನ್ನು ಪ್ರಾರಂಭಿಸಬೇಕಿದೆ. ಸುಗಮ ವಾಹನ ಸಂಚಾರಕ್ಕೆ ಯೋಗ್ಯವಾಗಿರಿಸಲು ರಸ್ತೆಯ ತಾತ್ಕಾಲಿಕ ನಿರ್ವಹಣೆಯನ್ನು ಮಾಡಲಾಗುತ್ತಿದೆ.

ಈ) ಬಂದಿದೆ. ಆದರೆ, ಭೂಸ್ವಾಧೀನ ಪ್ರಕ್ರಿಯೆಗಳ ವಿಳಂಬದಿಂದ ಯೋಜಿಸಿದ ಸಮಯದಲ್ಲಿ ಕಾಮಗಾರಿಯನ್ನು ಪ್ರಾರಂಭಿಸಲು ವ್ಯತ್ಯಯ ಉಂಟಾಗಿರುತ್ತದೆ.

ಉ) ಈ ಕೆಳಕಂಡ ಕಾರಣಗಳಿಂದ ರಸ್ತೆ ಕೆಲಸವನ್ನು ಪ್ರಾರಂಭಿಸಲು ತೊಂದರೆ ಉಂಟಾಗುತ್ತಿರುವುದು.

1. ಭೂಸ್ವಾಧೀನ ಪ್ರಕ್ರಿಯೆಗಳಲ್ಲಿ ಕೆಲವು ಫಲಾನುಭವಿಗಳು ತಮಗೆ ನೀಡಿರುವ ಪರಿಹಾರ ಮೊತ್ತವು ಮಾರುಕಟ್ಟೆ ದರಗಳಿಗಿಂತ ಕಡಿಮೆ

ಇರುವುದಾಗಿ ಪ್ರತಿಭಟಿಸಿದ್ದರು, ಈ ಸಮಸ್ಯೆಗಳನ್ನು ಹಲವು ಸಭೆಗಳ ಮೂಲಕ ಮನದಟ್ಟು ಮಾಡಿ ಬಹುತೇಕ ಫಲಾನುಭವಿಗಳ ಹೆಸರಿನಲ್ಲಿ ನ್ಯಾಯಾಲಯದಲ್ಲಿ ಠೇವಣಿ ಮಾಡಲಾಗಿದೆ. ಇದರಂತೆ ಬಹುತೇಕ ಸಮಸ್ಯೆಗಳನ್ನು ಪರಿಹರಿಸಲಾಗಿದ್ದು, ಕಾಮಗಾರಿಯು ಪ್ರಾರಂಭಗೊಂಡಿರುತ್ತದೆ.

2. ಗುತ್ತಿಗೆದಾರರೂ ಸಹ ಕಾಮಗಾರಿಗಳನ್ನು ಕೂಡಲೇ ಪ್ರಾರಂಭಿಸಿ ಮಾರ್ಚ 2016ರ ವೇಳೆಗೆ ಕಾಮಗಾರಿಗಳನ್ನು ಪೂರ್ಣಗೊಳಿಸಲು ಯೋಜಿಸುತ್ತಿದ್ದಾರೆ.

ಊ) ಈ ಕಾಮಗಾರಿಗಳಿಗೆ ನಿಗದಿಪಡಿಸಿರುವ ಒಟ್ಟು ಮೊತ್ತ ರೂ. 116.78 ಕೋಟಿಗಳು ಹಾಗೂ ನಿಗದಿ ಪಡಿಸಿರುವ ಸಮಯ 33 ತಿಂಗಳು. ಈವರೆಗೆ ರೂ. 62.95 ಕೋಟಿಗಳಷ್ಟು ಮೊತ್ತವನ್ನು ಗುತ್ತಿಗೆದಾರರಿಗೆ (ನವೆಂಬರ್ 2015ರ ಅಂತ್ಯಕ್ಕೆ) ಪಾವತಿಸಲಾಗಿದೆ.

ಋ) ಗುತ್ತಿಗೆ ಕರಾರಿನಂತೆ ಕಾಮಗಾರಿಯನ್ನು 20.12.2014 ರಂದು ಮುಗಿಸಬೇಕಾಗಿತ್ತು. ಆದರೆ, ಭೂ ಸ್ವಾಧೀನ ಪ್ರಕ್ರಿಯೆಯು ವಿಳಂಬ ವಾದುದರಿಂದ ನಿಗದಿತ ವೇಳೆಯಲ್ಲಿ ಋಣಮುಕ್ತ ರಸ್ತೆಯನ್ನು ಗುತ್ತಿಗೆದಾರರ ಸುಪರ್ದಿಗೆ ವಹಿಸಿ ಕೊಡಲು ಸಾಧ್ಯವಾಗಿಲ್ಲದಿರುವು ದರಿಂದ, ಮಾರ್ಚ್ 2016ರ ವರೆಗೆ ಕಾಲಾವಧಿಯನ್ನು ವಿಸ್ತರಿಸಲಾಗಿದೆ.

ಒಂದು ವೇಳೆ, ಇನ್ನು ಮುಂದೆ ಗುತ್ತಿಗೆದಾರರು ಕಾಮಗಾರಿಯನ್ನು ನಿಯಮಾನುಸಾರ ಪೂರ್ಣಗೊಳಿಸದಿದ್ದಲ್ಲಿ, ಸೂಕ್ತ ಕ್ರಮ ಜರುಗಿಸ ಲಾಗುವುದು.

ತೋಟಗಾರಿಕೆ ಇಲಾಖೆ ಆಸ್ತಿ

5324 (5752); ಡಾ: ಕೆ. ಶ್ರೀನಿವಾಸಮೂರ್ತಿ (ನೆಲಮಂಗಲ)

ಅ) ನೆಲಮಂಗಲ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ತೋಟಗಾರಿಕೆ ಇಲಾಖೆಗೆ ಸೇರಿದ ಆಸ್ತಿ, ಪ್ರಮಾಣವೆಷ್ಟು;